**PW_3**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

**ಸಿ.ಸಿ. 1649/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಸೈಯದ್ ಸಾದಿಕ್ | PW:3 |
| ತಂದೆಯ ಹೆಸರು | - ಖಲೀಲ್ ಸಾಬ್ | CW:2 |
| ವಯಸ್ಸು | - 53 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ಬೇಕರಿ ಕೆಲಸ | ದಿ: 28/02/2025 |
| ವಾಸ | - ಜೆ ಸಿ ಆರ್ ಬಡಾವಣೆ , ಚಿತ್ರದುರ್ಗ | |

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ:**

1. ನಿಪಿ.2 ಸಾಕ್ಷಿಗೆ ತೋರಿಸಿದ್ದು ಈ ಸಹಿ ನಿಮ್ಮದಾ ಎಂದರೆ ಹೌದು ಅಂತ ಒಪ್ಪಿಕೊಳ್ಳುತ್ತಾರೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ. ಸಾಕ್ಷಿಯು ಸಹಿಯನ್ನು ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಗಿದೆ. ಈ ಸಹಿ ಮಹಿಳಾ ಪೊಲೀಸ್ ಠಾಣೆಯಲ್ಲಿ 2 ವರ್ಷದ ಹಿಂದೆ ಮಾಡಿರುತ್ತೇನೆ. ನನ್ನ ಸಮಕ್ಷಮದಲ್ಲಿ ಮನ್ಸುರ್ ಎನ್ನುವವರು ಇದ್ದರು. ಮಹಜರ ಮಾಡಿರುವುದಿಲ್ಲ ಆದರೆ ಪೊಟೊ ತೆಗೆದುಕೊಂಡಿರುತ್ತಾರೆ. ಆ ಪೊಟೊ ಈಗಾಗಲೇ ನಿಪಿ.3 ಅಂತ ಗುರುತಿಸಲಾಗಿರುತ್ತದೆ. ನೋಟೀಸ್ ಗೂ ಕೂಡ ನನ್ನ ಸಹಿ ಪೊಲೀಸ್ ಠಾಣೆಯಲ್ಲಿ ಪಡೆದಿರುತ್ತಾರೆ. ಆ ನೋಟೀಸು ನಿಪಿ.4 ಅಂತ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ನಿಪಿ.2 ಮತ್ತು 4 ರಲ್ಲಿ ಸಹಿ ಮಾಡುವಾಗ ಬೇರೆ ಯಾರು ಇರಲಿಲ್ಲ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**PW_3**

**ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ**

2. ದಿಃ17.04.2022 ರಂದು ಚಿತ್ರದುರ್ಗ ನಗರದ ಜೋಗಿಮಟ್ಟ್‌ರಸ್ತೆಯ 4 ನೇ ಕ್ರಾಸ್ ನಲ್ಲಿ ಇರುವ ಮಾಸ್ತಮ್ಮ ತೋಟದ ಎದುರುಬಾಗದ ಮನೆಯ ಹತ್ತಿರ ಗಲಾಟೆ ವಿಷಯಕ್ಕೆ ಸಂಬಂದಿಸಿದಂತೆ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಚಾಸಾ.3 ರವರ ಸಮಕ್ಷಮದಲ್ಲಿ ಸಂಜೆ 5 ಗಂಟೆಯಿಂದ 6 ಗಂಟೆವರೆಗೆ ನಿಪಿ.2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಮುಂಚೆ ನನಗೆ ನಿಪಿ.4 ರಂತೆ ನೋಟೀಸು ನೀಡಿ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.4 ಮತ್ತು 2 ರ ಕಾಲಕ್ಕೆ ನಾನು ಹಾಜರಿದ್ದು ನೋಟೀಸನ್ನು ಪಡೆದುಕೊಂಡು ನಿಪಿ.2 ರ ಕಾಲಕ್ಕೆ ಹಾಜರಿದ್ದು ಸಹಿ ಮಾಡಿದ್ದರೂ ಸಹ ನಿಪಿ.3 ರಲ್ಲಿ ನಾನು ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಈಗ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಯ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**